ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 149-154
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸಂತ ಹಾಗೂ ಶರಣರ ಸಾಹಿತ್ಯದಲ್ಲಿ ಮೌಲ್ಯಗಳು

**ಡಾ. ಹೊನ್ನಪ್ಪ ಹೆಚ್. ಕಡೇನಾಯ್ಕನಹಳ್ಳಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜಿ.ಜಿ.ಡಿ. ಕಲೆ, ಬಿ.ಎಂ.ಪಿ. ವಾಣಿಜ್ಯ ಮತ್ತು
ಎಸ್.ವ್ಹಿ.ಎಸ್. ವಿಜ್ಞಾನ ಪದವಿ ಮಹಾವಿದ್ಯಾಲಯ, ಬೈಲಹೊಂಗಲ

***Abstract:***
*ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಭಾರತ ದೇಶವು ಸುಸಂಸ್ಕೃತವಾದ ಪರಂಪರೆಯನ್ನು ಹೊಂದಿದ ರಾಷ್ಟ್ರವಾಗಿದೆ. ಇಲ್ಲಿ ಆಚಾರ-ವಿಚಾರ, ಸಂಪ್ರದಾಯ, ಸಂಸ್ಕೃತಿ-ಪರಂಪರೆ ಎಲ್ಲವೂ ವಿಶಿಷ್ಟವಾಗಿವೆ. ನಮ್ಮಲ್ಲಿರುವ ಸಾಂಸ್ಕೃತಿಕ ಪರಂಪರೆಯನ್ನು ಜಗತ್ತಿನ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ನಮ್ಮ ಕರುನಾಡು ಸಹಿತ ಸಂಸ್ಕೃತಿಯ ಪರಿಮಳವನ್ನು ಸೂಸುವ ನಾಡಾಗಿದೆ. ನಮ್ಮ ಭಾರತದ ನೆಲದಲ್ಲಿ ಸಾಧು-ಸಂತರು, ಶಿವಶರಣರು, ಕವಿಪುಂಗವರನ್ನು ನೋಡುವುದೇ ಒಂದು ಸೌಭಾಗ್ಯ. ಇವರೆಲ್ಲರೂ ಭರತ ಭೂಮಿಯಲ್ಲಿ ತಮ್ಮ ಉಪದೇಶದಿಂದ ಅನೇಕ ಜೀವನದ ಮೌಲ್ಯಗಳನ್ನು ಬಿತ್ತಿ ಹೋಗಿದ್ದಾರೆ. ಇವರು ಹೇಳಿದ ಒಂದೊಂದು ಉಪದೇಶಗಳು ಎಲ್ಲ ಕ್ಷೇತ್ರಗಳಿಗೂ ಸಹಾಯಕವಾಗಿವೆ. ಪ್ರಸ್ತುತ ಈ ಲೇಖನದಲ್ಲಿ ಸಂತ ಹಾಗೂ ಶರಣರ ಸಾಹಿತ್ಯದ ಮೌಲ್ಯಗಳ ಕುರಿತು ಬೆಳಕು ಚೆಲ್ಲಲಾಗಿದೆ.*

***Keywords:*** *ಸಾಧು-ಸಂತರು, ಶಿವಶರಣರು, ವಚನ ಸಾಹಿತ್ಯ, ದಾಸ ಸಾಹಿತ್ಯ, ತತ್ವಪದ, ಜೀವನ ಮೌಲ್ಯಗಳು.*

**ಪೀಠಿಕೆ**

ಕರ್ನಾಟಕದಲ್ಲಿ 12 ಮತ್ತು 14, 15 ನೇ ಶತಮಾನಗಳಲ್ಲಿ ಸಂತರು-ಶರಣರು-ಋಷಿ ಮುನಿಗಳು ಅವತರಿಸಿ ಬಂದು ತಮ್ಮ ಅದ್ಭುತ ಕೊಡುಗೆಗಳನ್ನು ಸಮಾಜಕ್ಕೆ ನೀಡಿದ್ದಾರೆ. ಅದರಲ್ಲಿ ದಾಸರಾದ ಪುರಂದರದಾಸರು, ಸಂತ ಕನಕದಾಸರು, ತತ್ವಪದಕಾರರಾದ ಸಂತ ಶಿಶುನಾಳ ಶರೀಫಜ್ಜರು, ಹಾಗೂ ಶಿವಶರಣರು ಮತ್ತು ಶಿವಶರಣೆಯರಾದ ಜೇಡರ ದಾಸಿಮಯ್ಯ, ಅಲ್ಲಮಪ್ರಭುಗಳು, ಬಸವಣ್ಣನವರು, ಸಿದ್ಧರಾಮ ಶಿವಯೋಗಿಗಳು, ಸರ್ವಜ್ಞ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ ಹೀಗೆ ಇನ್ನೂ ಅನೇಕ ಸಂತರು-ಶಿವಶರಣರನ್ನು ನಾವು ನೋಡಬಹುದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೂಡಿಬಂದ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಪ್ರಕಾರಗಳು ವೇದ ಜ್ಞಾನದ ಮುಂದುವರಿದ ಭಾಗಗಳಾಗಿವೆ. ವೇದಗಳು ಜೀವನವನ್ನು ಆನಂದಮಯವಾಗಿ ಪರಿವರ್ತಿಸುವ ವಿಚಾರಧಾರೆಗಳಾಗಿವೆ. ನಾವು ಸಮಾಜದಲ್ಲಿ ಉತ್ಸಾಹದಿಂದ, ಸಂತೋಷದಿಂದ ಬಾಳಲಿಕ್ಕೆ ಗುರಿಯನ್ನು ರೂಪಿಸಿದ ಜ್ಞಾನದ ಭಾಗಗಳೇ ಈ ಶರಣರು ಹಾಗೂ ಸಂತರು ರೂಪಿಸಿದ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ. ಈ ಎರಡು ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಾಗಿವೆ. ವಚನ ಸಾಹಿತ್ಯವು. ಸರಳ ಭಾಷೆಯಲ್ಲಿ ಮೂಡಿ ಬಂದು ಜನಸಾಮಾನ್ಯರಿಗೆ

***Please cite this article as:*** ಹೊನ್ನಪ್ಪ ಹೆಚ್. ಕಡೇನಾಯ್ಕನಹಳ್ಳಿ. (2024). ಸಂತ ಹಾಗೂ ಶರಣರ ಸಾಹಿತ್ಯದಲ್ಲಿ ಮೌಲ್ಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(2), 149–154

ಹತ್ತಿರವಾಯಿತು. ಸಂಗೀತ ಮತ್ತು ಸಾಹಿತ್ಯದ ಸಾಮರಸ್ಯದಿಂದ ಮೆರೆದಿರುವ ಹರಿದಾಸ ಸಾಹಿತ್ಯ ಕೀರ್ತನೆಗಳಿಂದ ವಿಶ್ವಸಾಹಿತ್ಯಕ್ಕೆ ನೀಡಿದ ಕನ್ನಡದ ವಿಶೇಷ ಕೊಡುಗೆಯಾಗಿವೆ. ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯಕ್ಕೆ ಮೂಲ ಪ್ರೇರಣೆ ಭಕ್ತಿ–ಕಾಯಕ–ದಾಸೋಹವಾಗಿವೆ.

ಶರಣರು ಹಾಗೂ ದಾಸರು ನೀಡಿದ ಸಾಹಿತ್ಯ ನೈತಿಕ ಮೌಲ್ಯಗಳಿಂದ ತುಂಬಿ ಸಮಾಜದ ಅಂಕು–ಡೊಂಕುಗಳನ್ನು ತಿದ್ದಲು ಸಹಾಯಕವಾಗಿವೆ. ಸಾಧು–ಸಂತರ, ಶರಣರ ಸಂದೇಶಗಳು ಜಿಡ್ಡುಗಟ್ಟಿದ ಸಮಾಜವನ್ನು ಹೋಗಲಾಡಿಸಿ ಜಾತಿ ಧರ್ಮಗಳಲ್ಲಿನ ಭೇದ–ಭಾವ, ಬಡಬ–ಬಲ್ಲಿದನ ನಡುವಿರುವ ಅಸಮಾನತೆ, ಮೂಢನಂಬಿಕೆ, ಶೋಷಣೆ, ದೌರ್ಜನ್ಯಗಳನ್ನು ನಿರ್ಮೂಲನೆಗೊಳಿಸುವುದು ಮತ್ತು ಸಮಾಜದ ಹೆಣ್ಣು ಮಕ್ಕಳಿಗೆ ರಕ್ಷಣೆ ನೀಡಿ ಸ್ವಾತಂತ್ರ್ಯ ನೀಡುವುದು ಇವರ ಆದ್ಯತೆಯಾಗಿತ್ತು. ಇವರ ವಾಣಿಯಲ್ಲಿ ವಿಶ್ವವನ್ನೇ ಆಕರ್ಷಿಸುವ ಅದ್ಭುತಶಕ್ತಿ ಇತ್ತು. ಅದಕ್ಕೆ ಕಾರಣವೆಂದರೆ ಅವರ ಸಂದೇಶಗಳು ಮತ್ತು ಕೃತಿಗಳಲ್ಲಿರುವ ನೈತಿಕ ಮೌಲ್ಯಗಳು.

ಸಂತರು, ತತ್ವಪದಕಾರರು, ಶಿವಶರಣರು ಹೇಳಿದ ಮೌಲ್ಯಗಳೆಂದರೆ ದಯೆ, ಕರುಣೆ, ಅಹಿಂಸೆ, ಭಕ್ತಿ, ನೈತಿಕತೆ, ಸಂಸ್ಕೃತಿ, ಸಂಸ್ಕಾರ, ಸತ್ಯ, ಪ್ರಾಮಾಣಿಕತೆ, ಆಧ್ಯಾತ್ಮ, ಅನುಭಾವ, ಆಚಾರ–ವಿಚಾರ, ಗೌರವಭಾವನೆ, ಸದ್ಗುಣ, ಸದಾಚಾರ ಮತ್ತು ಸಚ್ಚಾರಿತ್ರ್ಯ ಹೀಗೆ ಒಂದಲ್ಲ, ಎರಡಲ್ಲ ನೂರಾರು ನೈತಿಕವಾದ ಮೌಲ್ಯಗಳನ್ನು ಸಮಾಜಕ್ಕೆ ಸಾಹಿತ್ಯದ ಮೂಲಕ ನೀಡಿದ್ದಾರೆ. ಅವುಗಳನ್ನು ಜೀವನದಲ್ಲಿ ಪ್ರತಿಯೊಬ್ಬರು ಅಳವಡಿಸಿಕೊಂಡರೆ ತಮ್ಮ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ.

**ಪುರಂದರ ದಾಸರು**

ದಾಸ ಪರಂಪರೆಗೆ ಪುರಂದರ ದಾಸರ ಸಾಹಿತ್ಯ ಸಾಧನೆ ದೊಡ್ಡದು. ಇವರ ಕೀರ್ತನೆಗಳು ಕರ್ನಾಟಕ ಸಂಗೀತ ಪದ್ಧತಿಯ ಬುನಾದಿಗಳಾದವು. ಕರ್ನಾಟಕ ಸಂಗೀತದ ಪಿತಾಮಹರಾದ ಪುರಂದರದಾಸರು ರಚಿಸಿದ ಪದಗಳು ಪ್ರಾಸ ಮತ್ತು ಅರ್ಥದಲ್ಲಿ ಶ್ರೀಮಂತವಾಗಿವೆ.

*"ಆಚಾರವಿಲ್ಲದ ನಾಲಿಗೆ ನಿನ್ನ*
*ನೀಚಗುಣವ ಬಿಡು ನಾಲಿಗೆ*
*ವಿಚಾರವಿಲ್ಲದೆ ಪರರ ದೂಷಿಪುದಕ್ಕೆ*
*ಚಾಚಿಕೊಂಡಿರುವಂಥ ನಾಲಿಗೆ*
*ಇದ್ದ ಮಾತನಾಡು ನಾಲಿಗೆ ಹಿಡಿ*
*ದೊಡ್ಡರೂ ಹುಸಿಬೇಡ ನಾಲಿಗೆ*
*ಇದ್ದುಕೊಂಡು ಉಣ್ಣು ಅಮೃತಾನ್ನಗಳನು*
*ಬುದ್ಧಿಯಲಿರು ಕಂಡೆಯ ನಾಲಿಗೆ"*

ಈ ಕೀರ್ತನೆಯಲ್ಲಿ ನಾವು ಹೇಗೆ ಮಾತನಾಡಬೇಕು ಎಂಬುದರ ಕುರಿತು ತಿಳಿಸಿದ್ದಾರೆ. ನಾಲಿಗೆ ಇದೆ ಎಂದು ಆಚಾರವಿಲ್ಲದೆ ಮಾತಾಡಬಾರದು. ಪರರನ್ನು ವಿಚಾರವಿಲ್ಲದೇ ಗೊತ್ತಿಲ್ಲದೆ ದೂಷಿಸಬಾರದು ಎಂಬ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನಮ್ಮ ಮಾತು ಆಚಾರ ವಿಚಾರದಿಂದ ಕೂಡಿರಬೇಕು ಎಂದು ತಿಳಿಸಿದ್ದಾರೆ. ಆಚಾರ–ವಿಚಾರ ಎಂಬ ಮೌಲ್ಯದ ಸಂದೇಶ ನೀಡಿದ್ದಾರೆ.

*ಅಂಜಿಕಿನ್ಯಾತಕಯ್ಯ ಸಜ್ಜನರಿಗೆ ಅಂಜಿಕಿನ್ಯಾತಕಯ್ಯ*
*ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ*
*ಕನಸಿನಲ್ಲಿ ಮನಸಿನಲಿ ಕಳವಳವಾದರೆ*
*ಹನುಮನ ನೆನೆದರೆ ಹಾರಿಹೋಗುವುದು ಪಾಪ*

ಈ ಕೀರ್ತನೆಯಲ್ಲಿ ಸಜ್ಜನರಿಗೆ ಅಂಜಿಕೆ ಬೇಡ ಎಂದಿದ್ದಾರೆ. ಸಂಜೀವರಾಯರನ್ನು ಸ್ಮರಿಸಿದ ಮೇಲೆ ಅಂಜಿಕೆ ಇಲ್ಲ ಎಂದಿದ್ದಾರೆ ಕನಸಲ್ಲಿ–ಮನಸಲ್ಲಿ ತೊಂದರೆಯಾದರೆ ಹನುಮನನ್ನು ನೆನೆದು ಬಿಡಿ ಎಲ್ಲ ಪಾಪಗಳು ಹೋಗಿಬಿಡುತ್ತವೆ ಎಂದು ಇಲ್ಲಿ ತಿಳಿಸಿದ್ದಾರೆ ಇಲ್ಲಿ ಭಕ್ತಿ ಎಂಬ ಮೌಲ್ಯವನ್ನು ಕಾಣಬಹುದು.

*"ಮಾನವ ಜನ್ಮ ದೊಡ್ಡದು*
*ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರ"*
*"ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ*
*ಉಣ್ಣದೆ ಉಪವಾಸ ಮಾಡುವರೆ"*

ಈ ಕೀರ್ತನೆಯಲ್ಲಿ ಪುರಂದರದಾಸರು ಮಾನವ ಜನ್ಮ ಅನ್ನೋದು ದೊಡ್ಡದು, ಇದು ಒಂದು ಸಾರಿ ಸಿಗುವಂತದ್ದು, ಹಾಗಾಗಿ ಈ ದೇವರು ಕೊಟ್ಟ ಜನ್ಮ ಹಾಳು ಮಾಡಿಕೊಳ್ಳಬೇಡಿ ಹಾಗೂ ಹೆಣ್ಣು–ಮಣ್ಣಿಗಾಗಿ ಹೊಡೆದಾಡಬೇಡಿ, ಆಶೆಗೆ ಬಿದ್ದು ಹಾಳಾಗಬೇಡಿ ಹರಿಯನ್ನು ಶ್ರದ್ಧೆಯಿಂದ ಭಕ್ತಿಯಿಂದ ಪೂಜಿಸಿ ನೆನೆಯಿರಿ ಎಂದಿದ್ದಾರೆ.

**ಸಂತ ಕವಿ ಕನಕದಾಸರು:**

***"ಕುಲ ಕುಲ ಕುಲವೆಂದು ಹೊಡೆದಾಡದಿರಿ***
***ನಿಮ್ಮ ಕುಲದ ನೆಲೆಯನೇನಾದರು***
***ಬಲ್ಲಿರಾ ಬಲ್ಲಿರಾ."***

ಈ ಕೀರ್ತನೆಯಲ್ಲಿ ಕುಲದ ನೆಲೆಯನ್ನು ನೀವೇನಾದರೂ ಕಂಡಿದ್ದಿರಾ ಎಂದು ಪ್ರಶ್ನಿಸಿದ್ದಾರೆ. ಏಕೆಂದರೆ ಆ ಕುಲ ಈ ಕುಲ ಎಂದು ಹೊಡೆದಾಡಬೇಡಿ ಮಾನವ ಕುಲ ಒಂದೇ ಎಂದು ಹೇಳಿ ಒಂದು ಗಂಡು ಒಂದು ಹೆಣ್ಣು ಎಂದು ಹೇಳಿದ್ದಾರೆ. ಜಾತಿ–ಧರ್ಮದ ಭೇದ–ಭಾವ ಅಳಿಸಿ ಸಮಾನತೆಯಿಂದ ಬಾಳಿ ಎಂದು ಕನಕದಾಸರು ಹೇಳಿದ್ದಾರೆ.

***"ದುರ್ಜನರ ಮನೆಯ ಪಾಯಸಾನ್ನಕ್ಕಿಂತ***
***ಸಜ್ಜನರ ಮನೆಯ ದಬ್ಬಾಳಿಕೆಗೆ ಲೇಸು***
***ಹೆಜ್ಜೆಗೆ ಸಾವಿರ ಹೊನ್ನನಿತ್ತರೂ ಬೇಡ***
***ಬಲು ದುರ್ಜನರ ಸಂಗ ಬಲು ಭಂಗ ಹರಿಯೆ"***

ಈ ಕೀರ್ತನೆಯಲ್ಲಿ ದುರ್ಜನರ ಸಹವಾಸ ಬೇಡವೆ ಬೇಡ ಎಂದಿದ್ದಾರೆ. ದುರ್ಜನರು ಪಾಯಸನ್ನಕೊಟ್ಟರು ಬೇಡ, ಸಾವಿರ ಹೊನ್ನು ಕೊಟ್ಟರು ಬೇಡ, ಸಜ್ಜನರ ಸಹವಾಸ ಲೇಸು ಎಂದಿದ್ದಾರೆ. ಸಜ್ಜನರು ದಬ್ಬಾಳಿಕೆ ಮಾಡಿದರೂ ಅದನ್ನು ಸಹಿಸಿಕೊಂಡು ಇರಬಹುದು ಆದರೆ ದುರ್ಜನರ ಸಹವಾಸ ಬಹಳ ಘೋರವಾದದ್ದು ಎಂದು ಕನಕದಾಸರು ತಿಳಿಸಿದ್ದಾರೆ.

***"ಮನದಲ್ಲಿ ಕಪಟವಿಟ್ಟುಕೊಂಡು, ಎಷ್ಟು ಜಪ ಮಾಡಿದರೇನು ಫಲ,***
***ವೇದ ಶಾಸ್ತ್ರಗಳನ್ನೋದಿ ಬಾಯಾರಿದರೇನು ಫಲ?***
***ಹೊಳೆಯೊಳಗೆ ಮುಳುಗಿ ತಪ ಮಾಡಿದರೇನು ಫಲ?***
***ಮನದಲ್ಲಿ ಕಪಟವಿರುವಾಗ ಎಲ್ಲವೂ ನಿಷ್ಫಲ"***

ಈ ಕೀರ್ತನೆಯಲ್ಲಿ ಮನಸು ಶುದ್ಧವಾಗಿರದೇ ವೇದಶಾಸ್ತ್ರ ಓದಿದರೂ, ನದಿಯಲ್ಲಿ ಮುಳುಗಿ ತಪ ಮಾಡಿದರೂ ಏನೂ ಪ್ರಯೋಜನವಿಲ್ಲ. ಮನಸು ಶುದ್ಧವಾಗಿಟ್ಟುಕೊಂಡು ಈ ಮೇಲಿನ ಕೆಲಸ ಮಾಡಿದರೆ ಪ್ರಯೋಜನವಾಗುತ್ತದೆ. ಒಳ್ಳೆಯ ಮನಸಿನಿಂದ ಕೆಲಸ ಮಾಡಿ ಅದರಿಂದ ಒಳ್ಳೆಯದಾಗುತ್ತದೆ ಎಂದಿದ್ದಾರೆ.

**ಸಂತ ಶಿಶುನಾಳ ಶರೀಪಜ್ಜರು**

ಸಂತ ಶಿಶುನಾಳ ಶರೀಪರು ಗುರುಗೋವಿಂದ ಭಟ್ಟರ ಶಿಷ್ಯರಾಗಿ ತತ್ವ ಪದಗಳನ್ನು ರಚಿಸುತ್ತಾ ಕರ್ನಾಟಕದ ತುಂಬಾ ಮನೆಮಾತಾಗಿದ್ದಾರೆ. ಇವರ ತತ್ವ ಪದಗಳಲ್ಲಿ ಜನರಿಗೆ ಬೇಕಾಗುವ ಮೌಲ್ಯಗಳನ್ನು ಸಾಕಷ್ಟು ನೋಡಬಹುದು. ಶರೀಪರಜ್ಜರು ರಚಿಸಿದ ತತ್ವಪದಗಳಲ್ಲಿ ಮತ್ತೊಂದು ವೈಶಿಷ್ಟ್ಯವೆಂದರೆ ಗ್ರಾಮೀಣ ಪದಗಳ ಬಳಕೆ. ಹಾಗಾಗಿ ಇವರ ಗೀತೆಗಳು ಕೇಳುಗರ ಮನಸನ್ನು ನೇರವಾಗಿ ಪ್ರವೇಶಿಸುತ್ತವೆ.

***"ದುಡ್ಡು ಕೆಟ್ಟದ್ದು ನೋಡಣ್ಣ – ದುಗ್ಗಾಣಿಗೆ***
***ದಡ್ಡನಾಗಬೇಡೋ, ತಿಂದೀ ನೀ ಮಣ್ಣ ।***
***ದುಡ್ಡು ಕೆಟ್ಟದ್ದೂ ಹೆಡ್ಡ ಮೂತಾತ್ಮ***
***ದೊಡ್ಡ ದೊಡ್ಡವರನ್ನೆ ಹೆಗ್ಗಾಲು ಇಡಿಸಿತು"***

ಈ ತತ್ವ ಪದದಲ್ಲಿ ಹಣದ ಅಹಂಕಾರದ ಕುರಿತು ತಿಳಿಸಿದ್ದಾರೆ. ದುಡ್ಡು ಬಹಳ ಕೆಟ್ಟದ್ದು ಮೂರ್ಖನಾಗಬೇಡ, ಮೂರ್ಖನಾಗಿ ದುಡ್ಡಿನ ಆಶೇಗೆ ಬಿಳಬೇಡ. ಆಶೆಗೆ ಬಿದ್ದರೆ ನೀನು ಮಣ್ಣನ್ನು ತಿನ್ನಬೇಕಾಗುತ್ತದೆ, ದುಡ್ಡು ದೊಡ್ಡವರನ್ನೇ ಬಿಟ್ಟಿಲ್ಲ ಅವರನ್ನು ಮಣ್ಣು ಮುಕ್ಕಿಸಿದೆ ಹಾಗಾಗಿ ದುಡ್ಡಿನ

ಆಶೆಗೆ ಬಿಳಬೇಡಿ ಹಾಗೂ ದುಡ್ಡಿನ ಅಹಂಕಾರ ಬಿಟ್ಟು ಸರಳ ಜೀವನ ನಡೆಸಬೇಕು ಎಂದಿದ್ದಾರೆ.

***"ಸೋರುತಿಹುದು ಮನೆಯ ಮಾಳಿಗಿ***
***ಅಜ್ಞಾನದಿಂದ***
***ಸೋರುತಿಹುದು ಮನೆಯ ಮಾಳಿಗಿ"***

ಈ ತತ್ವಪದದಲ್ಲಿ ಮನೆಯನ್ನು ದೇಹಕ್ಕೆ ಹೋಲಿಸಿದ್ದಾರೆ. ಮುರುಕು ಜಂತಿ, ಹುಳುಕು ತೊಲೆ, ಹುಬ್ಬಿ ಮಳೆಯಿಂದ ಮನೆ ಸೋರುತ್ತದೆ. ಇದನ್ನು ಸರಿಪಡಿಸಲು ಮನೆಗೆ ಒಬ್ಬ ಯಜಮಾನವಿರಬೇಕು ಎಂದಿದ್ದಾರೆ. ಹಾಗೆಯೇ ಈ ದೇಹವೆಂಬ ಮನೆಯಲ್ಲಿ ಅರಿಷಡ್ವರ್ಗಗಳು ಎಂಬ ಕಸ ಬೆಳೆದು ಅಜ್ಞಾನವೆಂಬ ಕತ್ತಲೆಗೆ ಸಿಲುಕಿ ಈ ದೇಹ ಹಾಳಾಗುತ್ತದೆ. ಅಜ್ಞಾನದಿಂದ ಜ್ಞಾನದ ಕಡೆಗೆ ಬರಬೇಕು. ಜ್ಞಾನದ ಕಡೆಗೆ ಬರಬೇಕಾದರೆ ಶಿಶುನಾಳದೀಶನ ಕೃಪಾಕೃಟಾಕ್ಷದ ಜರೂರಿಗೆ ಎಂದು ತಿಳಿಸಿದ್ದಾರೆ. ಅಂದರೆ ಜ್ಞಾನವೆಂಬ ಮೌಲ್ಯದ ಕುರಿತು ತಿಳಿಸಿದ್ದಾರೆ.

***"ಗುಡಿಯ ನೋಡಿರಣ್ಣ***
***ದೇಹದ ಗುಡಿಯ ನೋಡಿರಣ್ಣ"***
***"ಅತ್ತ ಇತ್ತ ಹರಿದಾಡುವ ಮನಸಿಗೆ***
***ಮಚ್ಚಿಲ್ಹೊಡೆದು ನಿಲ್ಲಿಸು ಜಾಣ"***

ಈ ಮೇಲಿನ ತತ್ವಪದಗಳಲ್ಲಿ ಶರೀಪಜ್ಜರು ದೇಹವನ್ನು ಪರಾಚೈತನ್ಯದ ಆವಾಸವಾಗಿದೆ ಎಂದಿದ್ದಾರೆ. ಅಂದರೆ ದೇವರ ಗುಡಿಯಾಗಿದೆ ಎಂದಿದ್ದಾರೆ. ದೇಹದ ಮಹತ್ವವನ್ನು ಕುರಿತು ತಿಳಿಸಿದ್ದಾರೆ. ಮನಸು ಹತೋಟಿಯಲ್ಲಿಟ್ಟುಕೊಂಡು ಜೀವನ ನಡೆಸಬೇಕು. ಅತ್ತಲಿತ್ತ ಅಂದರೆ ಕೆಟ್ಟದರ ಕಡೆಗೆ ಮನಸು ಹೋಗದಂತೆ ನೋಡಿಕೊಳ್ಳಬೇಕು. ಹೋಗುವಾಗ ಮನಸ್ಸನ್ನು ಮಚ್ಚಿಲೆ ಹೊಡೆದು ಹೋಗದ ಹಾಗೆ ನೋಡಿಕೊಳ್ಳಬೇಕು ಎಂದಿದ್ದಾರೆ.

**ಶರಣರ ಸಾಹಿತ್ಯದಲ್ಲಿ ಲೋಕಾರೂಡಿಗಳು**

- ದಯವೇ ಧರ್ಮದ ಮೂಲವಯ್ಯ
- ಕಾಯಕವೇ ಕೈಲಾಸ
- ಅರಿವೇ ಗುರು
- ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ
- ದೇವನೊಬ್ಬ ನಾಮ ಹಲವು
- ಉಳ್ಳವರು ಶಿವಾಲಯ ಮಾಡುವರಯ್ಯ
- ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ
- ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ.
- ಅಯ್ಯ ಎಂದರೆ ಸ್ವರ್ಗ, ಎಲವೋ ಎಂದರೆ ನರಕ
- ಲೋಕದ ಡೊಂಕು ನೀವೇಕೆ ತಿದ್ದುವಿರಿ ?
- ಕೊಟ್ಟ ಕುದುರೆಯನೇರಲರಿಯದೇ ಮತ್ತೊಂದು ಕುದುರೆಯ ಬಯಸುವರು.
- ನುಡಿದರೆ ಮುತ್ತಿನ ಹಾರದಂತಿರಬೇಕು.
- ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು.

ಇಂತಹ ಅನೇಕ ಲೋಕಾರೂಡಿಗಳನ್ನು ಶರಣರ ಸಾಹಿತ್ಯದಿಂದ ತಿಳಿದುಕೊಂಡರೆ ಒಂದೊಂದು ಮಾತುಗಳು ಮಾನವನ ಜೀವನಕ್ಕೆ ಅತ್ಯಮೂಲ್ಯವಾದ ನೈತಿಕತೆಯ ಮೌಲ್ಯಗಳಾಗಿವೆ.

ಜೇಡರ ದಾಸಿಮಯ್ಯ :

***ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ***
***ಹಿರಿದಪ್ಪ ರಾಜ್ಯವ ನಿತ್ತಡೆ ಒಲ್ಲೆ***
***ನಿಮ್ಮ ಶರಣರ ಸೂಳ್ನುಡಿಯನೊಂದರಗಳಿಗೆಯಿತ್ತಡೆ***
***ನಿಮ್ಮ ನಿತ್ತೆ ಕಾಣಾ ರಾಮನಾಥ.***

ಈ ವಚನದಲ್ಲಿ ಜೇಡರದಾಸಿಮಯ್ಯನವರು ಆನೆಕೊಟ್ಟರು ಬೇಡ, ಸಂಪತ್ತುಕೊಟ್ಟರು ಬೇಡ, ಹಿರಿದಾದ ರಾಜ್ಯದ ಅಧಿಕಾರ ಕೊಟ್ಟರೂ ಬೇಡ. ಶರಣರ ಅನುಭಾವದ ನುಡಿಗಳಿದ್ದರೆ ಸಾಕು ಎಂದಿದ್ದಾರೆ ಅಂದರೆ ಇಲ್ಲಿ ಹಣ, ಅಂತಸ್ತು,

ಅಧಿಕಾರಕ್ಕಿಂತ ಶರಣರ ನುಡಿಗಳೇ ಶ್ರೇಷ್ಠ ಎಂದಿದ್ದಾರೆ.

**ಅಲ್ಲಮ ಪ್ರಭುಗಳು :**

***ಹೊನ್ನು ಮಾಯೆಯೆಂಬರು***
***ಹೊನ್ನು ಮಾಯೆಯಲ್ಲ***
***ಹೆಣ್ಣು ಮಾಯೆಯೆಂಬರು***
***ಹೆಣ್ಣು ಮಾಯೆಯಲ್ಲ***
***ಮಣ್ಣು ಮಾಯೆಯೆಂಬರು***
***ಮಣ್ಣು ಮಾಯೆಯಲ್ಲ***
***ಮನದ ಮುಂದಣ ಆಶೆಯೇ ಮಾಯೆ***
***ಕಾಣಾ ಗುಹೇಶ್ವರ ।***

ಈ ವಚನದಲ್ಲಿ ತಾವು ಮಾಡುವ ತಪ್ಪುಗಳಿಗೆ ಹೊರಗಿನ ವಸ್ತುಗಳನ್ನು ವ್ಯಕ್ತಿಗಳನ್ನು ಹೊಣೆಯಾಗಿಸುವುದು ಮಾನವ ಸಹಜ ದೌರ್ಬಲ್ಯ. ಸ್ವತಃ ತನ್ನ ಕೋರಿಕೆಗಳನ್ನು ನಿಯಂತ್ರಿಸಿಕೊಳ್ಳಲಾಗದೇ ಹೆಣ್ಣಿನ ಸೌಂದರ್ಯ, ಭೂಮಿಯ ಒಡೆತನದಿಂದ ದೊರಕುವ ಅಂತಸ್ತು, ಬಂಗಾರಕ್ಕಿರುವ ಸಾರ್ವತ್ರಿಕ ಮೌಲ್ಯ ತನ್ನನ್ನು ಪ್ರಲೋಭನೆಗೊಳಿಸಿತು ಎಂದು ದೂರುವುದರಲ್ಲಿ ಅರ್ಥವಿಲ್ಲ. ಅವರವರ ದೌರ್ಬಲ್ಯವೇ ಅವರವರಿಗೆ ಮಾಯೆಯಾಗಿ ಕಾಡುತ್ತದೆ ಎಂದು ಅಲ್ಲಮಪ್ರಭುಗಳು ಹೇಳಿದ್ದಾರೆ. ಇಲ್ಲಿ ಹೆಣ್ಣು, ಹೊನ್ನು, ಮಣ್ಣು ಮಾಯೆಯಲ್ಲ. ಆಶೆಗಳೇ ಅವರನ್ನು ಹಾಳು ಮಾಡುತ್ತವೆ ಎಂದಿದ್ದಾರೆ.

**ಬಸವಣ್ಣನವರು :**

***ದಯವಿಲ್ಲದ ಧರ್ಮವವೇವುದಯ್ಯಾ ?***
***ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ***
***ದಯವೇ ಧರ್ಮದ ಮೂಲವಯ್ಯಾ***
***ಕೂಡಲ ಸಂಗಯ್ಯನಂತಲ್ಲ ದೊಲ್ಲನಯ್ಯಾ ॥***

ಈ ವಚನದಲ್ಲಿ ಬಸವಣ್ಣನವರು ಹೇಳಿದ್ದೇನೆಂದರೆ ಯಾವುದೇ ಧರ್ಮವಾದರೂ ದಯೆ ಎಂಬ ಅಡಿಪಾಯ ಹೊಂದಿರಬೇಕು. ಸಕಲ ಜೀವಿಗಳಲ್ಲೂ ಕಾರುಣ್ಯ–ಪ್ರೀತಿ ಇರಬೇಕು, ಪ್ರೀತಿ–ಕರುಣೆ ಇಲ್ಲದಿದ್ದರೆ ಅದು ಧರ್ಮವೆ ಅಲ್ಲ ಎಂದಿದ್ದಾರೆ. ಇಲ್ಲಿ ದಯೆ, ಕರುಣೆ ಎಂಬ ಮೌಲ್ಯದ ಕುರಿತು ಹೇಳಿದ್ದಾರೆ.

**ಸರ್ವಜ್ಞ :**

***ಅನ್ನದಾನಗಳಿಂದ । ಮುನ್ನದಾನಗಳಿಲ್ಲ ।***
***ಅನ್ನಕ್ಕೆ ಮಿಗಿಲು ಇನ್ನಿಲ್ಲ ಜಗದೊಳಗೆ ।***
***ಅನ್ನವೇ ಪ್ರಾಣ ಸರ್ವಜ್ಞ ।***

ಈ ವಚನದಲ್ಲಿ ಸರ್ವಜ್ಞ ದಾನದ ಕುರಿತು ತಿಳಿಸಿದ್ದಾರೆ. ಅನ್ನದಾನಕ್ಕಿಂತ ಹೆಚ್ಚಿನ ದಾನಗಳು ಯಾವುದೂ ಇಲ್ಲ. ಜಗತ್ತಿನೊಳಗೆ ಅನ್ನಕ್ಕಿಂತ ಹೆಚ್ಚು ತೃಪ್ತಿಕರವಾದ ವಸ್ತು ಯಾವುದಿಲ್ಲ. ಏಕೆಂದರೆ ಎಲ್ಲ ಜೀವಿಗಳ ಪ್ರಾಣವು ಅನ್ನವನ್ನೇ ಅವಲಂಬಿಸಿದೆ ಎಂದು ತಿಳಿಸಿದ್ದಾರೆ. ಸರ್ವಜ್ಞ ಹೇಳಿದ ಹಾಗೆ ಅನ್ನದಾನ ಮಹಾದಾನ ಎಂದು ತಿಳಿದುಕೊಡು ದಾನ ಮಾಡುವ ಮೌಲ್ಯ ಬೆಳೆಸಿಕೊಳ್ಳಬೇಕು.

**ಸಿದ್ಧರಾಮ ಶಿವಯೋಗಿಗಳು :**

***ತಾ ಮಾಡಿದ ಹೆಣ್ಣು ತಲೆಯನೇರಿತ್ತು***
***ತಾ ಮಾಡಿದ ಹೆಣ್ಣು ತೊಡೆಯನೇರಿತ್ತು***
***ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆವೇರಿತ್ತು***
***ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು***
***ಅದು ಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ***
***ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ।***

ಈ ವಚನದಲ್ಲಿ ಸಿದ್ಧರಾಮ ಶಿವಯೋಗಿಗಳು ಹೆಣ್ಣನ್ನು ಪೂಜಿಸುವ ನಮ್ಮ ನೆಲದಲ್ಲಿ ಸ್ತ್ರೀಯನ್ನು ಕೊಂಡಾಡಿದ್ದಾರೆ. ಹೆಣ್ಣು ಬ್ರಹ್ಮನ, ನಾರಾಯಣನ ನಾಲಿಗೆ, ಎದೆ, ತಲೆ, ತೊಡೆಗ ಮೇಲೆ ಸ್ಥಾನ ಪಡೆದಿದ್ದಾಳೆ ಹಾಗಾಗಿ ಅವಳು ರಾಕ್ಷಸಿಯಲ್ಲ ಸಾಕ್ಷಾತ್ ದೇವತೆಗೆ ಸಮಾನಳು ಎಂದಿದ್ದಾರೆ.

ಅಂದರೆ ಪ್ರಸ್ತುತ ಕಾಲಮಾನದಲ್ಲಿ ಹೆಣ್ಣಿನ ಸ್ಥಾನಮಾನ ಕೆಟ್ಟು ಹೋಗಿದೆ. ಹೆಣ್ಣಿಗೆ ರಕ್ಷಣೆಯಿಲ್ಲ ಸ್ವಾತಂತ್ರ್ಯವಿಲ್ಲ ಹಾಗಾಗಿ ಇಂತಹ ಸಾಹಿತ್ಯದಿಂದಲಾದರೂ ತಿಳಿದುಕೊಂಡು ಹೆಣ್ಣಿಗೆ ಗೌರವವನ್ನು ಕೊಟ್ಟು ಪೂಜಿಸಬೇಕಾಗಿದೆ. ಶರಣರ

ವಚನದಿಂದ ಹೆಣ್ಣಿಗೆ ಗೌರವ ನೀಡುವುದನ್ನು ಕಲಿಯಬಹುದು.

**ಅಕ್ಕಮಹಾದೇವಿ:**

***ಹಸಿವಾದೊಡೆ ಭಿಕ್ಷಾನ್ನಗಳುಂಟು***
***ತೃಷೆಯಾದರೆ ಕೆರೆ ಹಳ್ಳ ಭಾವಿಗಳುಂಟು***
***ಶಯನಕ್ಕೆ ಹಾಳು ದೇಗುಲಗಳುಂಟು***
***ಚೆನ್ನಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೆನಗುಂಟು.***

ಈ ವಚನದಲ್ಲಿ ಅಕ್ಕಮಹಾದೇವಿಯು ಹಸಿವಾದರೆ ಭೀಕ್ಷೆ ಇದೆ, ದಾಹ ಆದರೆ ಕೆರೆ ಹಳ್ಳಗಳ ನೀರಿದೆ, ದೇಹಕ್ಕೆ ವಿಶ್ರಾಂತಿ ತೆಗೆದುಕೊಳ್ಳಲು ಹಾಳು ದೇವಾಲಯಗಳಿವೆ ಆದರೆ ನನಗೆ ಆತ್ಮ ಸಂಗಾತಿಯಾಗಿ ನೀನೆನನಗಂಟು ಎಂದು ಹೇಳಿದ್ದಾಳೆ ಇಲ್ಲಿ ಚೆನ್ನಮಲ್ಲಿಕಾರ್ಜುನನೇ ನನಗೆ ಎಲ್ಲವೂ ಎಂದು ಹೇಳಿದ್ದಾಳೆ. ಇಲ್ಲಿ ತಿಳಿಯುವುದು ಏನೆಂದರೆ ದೇವರು ನಮಗೆಬೇಕು, ದೇವರನ್ನು ಪೂಜಿಸಬೇಕು, ಚೆನ್ನಮಲ್ಲಿಕಾರ್ಜುನನೇ ದೇವರು ಎಂದು ಹೇಳಿ ದೇವರ ಮಹಿಮೆಯನ್ನು ಕುರಿತು ಅಕ್ಕಮಹಾದೇವಿ ತಿಳಿಸಿದ್ದಾಳೆ.

ಹೀಗೆ ಇನ್ನೂ ಅನೇಕ ಶಿವಶರಣರ-ಶರಣೆಯರ ಸಾಹಿತ್ಯದಿಂದ ಜೀವನದ ಮೌಲ್ಯಗಳನ್ನು ತಿಳಿಯಬಹುದು.

ಸಂತ ಹಾಗೂ ಶರಣರ ಸಾಹಿತ್ಯದಲ್ಲಿ ತಾವು ಬದುಕಿದಂತೆ ತಮ್ಮ ಜೀವನ ದರ್ಶನವನ್ನು ಸಾಹಿತ್ಯದ ಮೂಲಕ ತಿಳಿಸಿದ್ದಾರೆ. ಅವರು ಹೇಳಿದ ಮೌಲ್ಯಗಳನ್ನು ನಾವುಗಳು ಜೀವನದಲ್ಲಿ ಅಳವಡಿಸಿಕೊಂಡು ಆ ಮೌಲ್ಯಗಳನ್ನು ಮುಂದಿನ ಜನಾಂಗಕ್ಕೆ ತಿಳಿಸಿಕೊಟ್ಟರೆ ನಮ್ಮ ಜೀವನ ಸಾರ್ಥಕವಾಗುತ್ತದೆ. ಸಾಹಿತ್ಯದಿಂದ ಓದುಗನಿಗೆ ಹಾಗೂ ಸಮಾಜದ ಜನರಿಗೆ ಮೌಲ್ಯಗಳನ್ನು ತಿಳಿಸಿಕೊಡಲು ಸಹಾಯವಾಗುತ್ತದೆ. ಇಲ್ಲಿ ಕೆಲವೇ ಕೆಲವು ಸಂತರ ಹಾಗೂ ಶರಣರ ವಚನಗಳನ್ನು ಮಾತ್ರ ತೆಗೆದುಕೊಂಡು ಅದರಲ್ಲಿರುವ ಮೌಲ್ಯಗಳನ್ನು ಮಾತ್ರ ತಿಳಿಸಿದ್ದೇನೆ. ಇನ್ನೂ ಹಲವಾರು ಸಂತರ ಹಾಗೂ ಶರಣರ ಸಾಹಿತ್ಯದಲ್ಲಿ ಜೀವನಕ್ಕೆ ಬೇಕಾದ ಅತ್ಯಮೂಲ್ಯವಾದ ಮೌಲ್ಯಗಳನ್ನು ತಿಳಿದುಕೊಳ್ಳಬಹುದು.

**ಪರಾಮರ್ಶನ ಗ್ರಂಥಗಳು**


- ವೆಂಕಟೇಶಮೂರ್ತಿ. ಎಚ್.ಎಸ್. (2012). *ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ-ಕೀರ್ತನಗಾರರು ಸಂಪುಟ-8.* ಸಪ್ನ ಬುಕ್‌ಹೌಸ್.
- ಶ್ರೀನಿವಾಸಮೂರ್ತಿ.ಎಂ.ಆರ್. *ವಚನ ಧರ್ಮಸಾರ.* ಕನ್ನಡ ಸಾಹಿತ್ಯ ಪರಿಷತ್ತು.
- ಭೂಸನೂರಮಠ ಸಂ. ಶಿ. (2006). *ವಚನ ಸಾಹಿತ್ಯ ಸಂಗ್ರಹ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ವೀರಣ್ಣ ರಾಜೂರ. *ಶರಣ ಸಂಚಯ.*
- ಶಿವಾನಂದ ಗುಬ್ಬಣ್ಣವರ. (ಸಂ.) (20017). *ಶಿಶುನಾಳ ಶರೀಫರ ತತ್ವಪದಗಳು.* ಕನ್ನಡ ಪುಸ್ತಕ ಪ್ರಾಧಿಕಾರ.